ನಟರಾಜ್ ಹುಳಿಯಾರ್

ಕಲೆ: ಮಂಜುನಾಥ ವಿ.ಎಂ.

# ಒಂದು ಫೋಟೊ ಬ್ರೇಕ್ ನಂತರ...

## 1

ಕಳೆದ ಜನವರಿ ಒಂದನೆಯ ತಾರೀಕು ಪ್ರಖ್ಯಾತ ನಟಿ ರಂಜಿತಾಸೇನ್ ರಾಜಾಮಹಲ್ ಬಡಾವಣೆಯ ಮಿಲೆನಿಯಂ ಅಪಾರ್ಟ್‌ಮೆಂಟಿನ ಆರನೆಯ ಮಹಡಿಯಿಂದ ಹಾರಿ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದ ಸುದ್ದಿ ನಿಮಗೆಲ್ಲ ತಿಳಿದೇ ಇದೆ...

ಆದರೆ, ಆ ಬ್ರೇಕಿಂಗ್ ಸುದ್ದಿ ಬಂದ ಮೇಲೆ ಟೀವಿ ರಿಪೋರ್ಟರ್ ಮಲ್ಲಿಕಾಗೆ ಶುರುವಾದ ವಿಚಿತ್ರ ತಳಮಳಗಳ ಕತೆ ನಿಮಗೆ ಗೊತ್ತಿರಲಿಕ್ಕಿಲ್ಲ...

ಮಲ್ಲಿಕಾಗೆ ಇತ್ತೀಚಿತ್ತಲಾಗಿ ಸಿನಿಮಾ ರಿಪೋರ್ಟಿಂಗ್ ಮಾಡಿ ತಲೆ ಚಿಟ್ಟು ಹಿಡಿದದ್ದು ಒಂದೆಡೆಯಾದರೆ, ಮತ್ತೊಂದೆಡೆ ಕಳೆದೊಂದು ತಿಂಗಳಿಂದ ಗೆಳೆಯ ರಮೇಶ್ ರೆಡ್ಡಿಯ ನಿಗೂಢ ನಡವಳಿಕೆಗಳು ಅಪಾರ ಕಿರಿಕಿರಿ ಹುಟ್ಟಿಸಿದ್ದವು. ಐವತ್ತು ಜನ ಶಾಸಕರು ಮುಂಬೈನ ಹೋಟೆಲೊಂದರಲ್ಲಿ ಬಂದಿಯಾಗಿದ್ದಾಗ ಆ ಬೆಳವಣಿಗೆಗಳನ್ನು ರಿಪೋರ್ಟ್ ಮಾಡಲೆಂದು ಮುಂಬಯಿಗೆ ಹಾರಿ ಹೋಗಿದ್ದ ರಮೇಶ್, ಅಲ್ಲಿನ ಅಡ್ಡಾಟದ ಒತ್ತಡದಲ್ಲಿ ಮಲ್ಲಿಕಾ ಫೋನಿಗೂ ಸರಿಯಾಗಿ ಸಿಕ್ಕುತ್ತಿರಲಿಲ್ಲ. ಒಂದು ತಿಂಗಳು ಮುಂಬೈಯಲ್ಲಿ ಆರಾಮಾಗಿ ಇದ್ದು ಬಂದಂತೆ ಕಂಡ ರಮೇಶ್, ಮುಂದಿನ ಒಂದೇ ವಾರಕ್ಕೆ ಮಲ್ಲಿಕಾಗೆ ಒಂದು ಮಾತೂ ಹೇಳದೆ ನಿಗೂಢವಾಗಿ ಚಾನಲ್ ಕೆಲಸ ಬಿಟ್ಟಿದ್ದ. ಇದರ ಜೊತೆಗೇ ಆಫೀಸಿನ ಇತರ ರಗಳೆಗಳೂ ಸೇರಿಕೊಂಡು ಮಲ್ಲಿಕಾ ಕಳೆದೊಂದು ವಾರದಿಂದ ಸಂಬಳರಹಿತ ರಜಾ ಹಾಕಿದ್ದಳು. ಆಫೀಸಿನಿಂದ ಹದಿನೈದು ಕಿಲೋಮೀಟರ್ ದೂರದಲ್ಲಿ ಜನರ ಅತಿಯಾದ ಓಡಾಟವಿಲ್ಲದ ಹೊಸ ಬಡಾವಣೆಯೊಂದರ ಪೀಜಿ ಸೇರಿ, ಯಾರ ತಂಟೆಗೂ ಹೋಗದೆ ಒಬ್ಬಳೇ ಸುಮ್ಮನೆ ರೂಮಿನಲ್ಲಿದ್ದಳು. ನಡುವೆ ರಮೇಶ್ ನೆನಪಾದಾಗ, 'ಬದುಕಿದ್ದೀಯೋ ಸತ್ತಿದ್ದೀಯೋ ಎಂದು ಫಾರ್ಮ್ಯಾಲಿಟಿಗೂ ಒಂದು ಫೋನ್ ಮಾಡಿ ವಿಚಾರಿಸಿಲ್ಲ, ರಾಸ್ಕಲ್...' ಎಂದು ಮಲ್ಲಿಕಾಗೆ ರೇಗುತ್ತಿತ್ತು; ಅದರ ಬೆನ್ನಿಗೇ, 'ನನ್ನ ಮನಸ್ಸು ಸರಿಯಾದ ಮೇಲೇ ನಾನೇ ಫೋನ್ ಮಾಡುತ್ತೇನೆ; ಅಲ್ಲಿಯ ತನಕ ನೀನು ಫೋನ್ ಮಾಡಬೇಡ' ಎಂದು ತಾನೇ ಕಡ್ಡಿ ಎರಡು ತುಂಡು ಮಾಡಿದಂತೆ ಹೇಳಿದ್ದೂ ನೆನಪಾಗುತ್ತಿತ್ತು.

ಈಚಿನ ವರ್ಷಗಳಲ್ಲಿ ಎಂದೂ ಸಿಕ್ಕಿರದ ಈ ಏಕಾಂತವನ್ನು ಅನುಭವಿಸುತ್ತಾ, ಈ ಥರ